Regd No M 1299 34 th Year ತಾ|| 14—5—51

SATYAVADI

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ತೀವ್ರ ಮತಭೇದ

ಮಂತ್ರಿಗಳಿಬ್ಬರಲ್ಲಿ

ಡಾಂಗ ಜಿಲ್ಲೆಗಳ ಭವಿತವ್ಯದ ಬಗೆಗೆ ಕೇಂದ್ರದ ಸಚಿವರುಗಳಿಬ್ಬರಲ್ಲಿ ತೀವ್ರ ಮತಭೇದ ಒಂದಿದೆ. ಕೆ ಎಂ. ಮುನಶಿಯವರು ಮತ್ತು ಗಾಡಗೀಳರು ಈ ವಾದವಿವಾದಕಾರ್ಯಂಭಿಸಿರುವರು' ಒಬ್ಬರು ಡಾಂಗ ಜಿಲ್ಲೆ ನಾಸಿಕಕ್ಕೆ ಸೇರಬೇಕೆಂದು ಮತ್ತೊಬ್ಬರು ಸೂರತ್ತಿಗೆ ಹೋಗಬೇಕೆಂದು ವಾದಿಸತೊಡಗಿದ್ದಾರೆ. ಇಬ್ಬರ ನುಡ್ಯೆ ನೆಹರುರವರು ಪ್ರವೇಶಿಸಿರುವರು. ಗಾಡಗೀಳರ ವಾದ ನಾಸಿಕಕ್ಕೆ ಸೇರುವ ವಿಚಾರವನ್ನು ನೆಹರುರವರು ಎತ್ತಿಹಿಡಿದಂತಿದೆ.

ರಾಜ್ಯಾಂಗ ತಿದ್ದುಪಡಿ !

ನವದೆಹಲಿ— ರಾಜ್ಯಾಂಗ ತಿದ್ದುಪಡಿ ಬಗ್ಗೆ ಪಾರ್ಲಿಮೆಂಟಿನಲ್ಲಿ ಮಸೂದೆಯನ್ನು ಪಂ|| ನೆಹರು ಸೂಚಿಸಿದರು ; ಇದು ಜಮೀನ್ದಾರಿ ಮಸೂದೆ ಉಳಿಸಲೂ ವಾಕ್‌ಸ್ವಾತಂತ್ರ್ಯ ಅದುಮಲೂ; ಹಿಂದುಳಿದವರ ವಿದ್ಯಾನುಕೂಲ ಪಡಿಸಲೂ ಸಹಕಾರಿಯಾಗಿದೆ. ಇದು ಮುಂಜೂರಾಗಲು ಪಾರ್ಲಿಮೆಂಟು ಮೆಂಬರುಗಳ ಬಹುಮತವೂ, ಮತ್ತು - ಸಭೆಯಲ್ಲಿ ಹಾಜರಿರುವ ಮೆಂಬರುಗಳ ಸಖ್ಯೆಯ ಮೂರನೇ ಎರಡು ಭಾಗದಷ್ಟು ಜನರ ಬೆಂಬಲವೂ ಅವಶ್ಯಕ ; ಅದಕ್ಕಾಗಿ ಕಾಂಗ್ರೆಸ್ ಪಾರ್ಟಿ ವಿಪ್ಪು ಮೇ 20 ರಿಂದ ಮಸೂದೆ ಮುಂಜೂಂತಾಗುವವರೆಗೆ ಪಾರ್ಲಿಮೆಂಟಿನಲ್ಲಿ ಪಾರ್ಟಿ ಮೆಂಬರುಗಳು ಹಾಜರಿರಬೇಕೆಂದು ಸುಗ್ರೀವಾಜ್ಞೆ ಕೊಟ್ಟಿದಾರೆ

× ಅಖಿಲ ಭಾರತ ಉಣ್ಣೆ ವ್ಯಾಪಾರಿಗಳ ಸಂಘೀಕನ ಭಾರತ ಸರ್ಕಾರ 10 ಲಕ್ಷ ಪೌಂಡು ಉಣ್ಣೆಯನ್ನು ರಫ್ತು ಮಾಡಲು ಮಾಡಿರುವ ತೀರ್ಮಾನಕ್ಕೆ ತನ್ನ ಅಸಮ್ಮತಿ ಸೂಚಿಸಿದೆ.

× ಭಾರತ ಸರ್ಕಾರವನ್ನು ಆರ್ಥಿಕ ವೃದ್ಧಿ ಯೋಜನೆಗಾಗಿ ಅಸ್ಸಾಂ ರೂ. 32 ಕೋಟಿ ಸಾಲ ಕೇಳಿದೆ

× ಈ ಬಾರಿ ಕೊನೇ ಪಕ್ಷ ಹತ್ತು ರಾಷ್ಟ್ರಗಳಿಂದ ಒಂದು ಕೋಟಿ ಟನ್ ಗಳಷ್ಟು ಧಾನ್ಯವನ್ನು ಭಾರತ ಕೊಳ್ಳಲಿದೆ ಎಂದು ವಾಷಿಂಗ್ಟನ್ ವಾರ್ತೆ

ನವದೆಹಲಿ— ಮಹಿಳೆಯರು ಪಾರ್ಲಿಮೆಂಟಿನ ಸದಸ್ಯರಾಗಲು ಅನರ್ಹರೆಂದು ಅಸ್ಸಾಮಿನ ಶ್ರೀ ರೋಹಿಣಿಕುಮಾರ ಚೌಧರಿಯವರು ಪಾರ್ಲಿಮೆಂಟಿನಲ್ಲಿ ಅಂದಾಗ ಸ್ತ್ರೀ ಸದಸ್ಯರು ತೀವ್ರವಾಗಿ ಪ್ರತಿಭಟಿಸಿದರು.

ಸರ್ಕಾರಿ ಪ್ರಕಟಣೆ

ಮೈಸೂರು ಸಂಸ್ಥಾನದ ಅಡಳಿತ ಹಾಗೂ ಪೋಲಿಸ್ ಖಾತೆಗಳನ್ನು ಕೇಂದ್ರ ಧೊಡನೆ ಲೀನ ಮಾಡಲು ತೀರ್ಮಾನವಾಗಿದೆಯೆಂದು ಕೆಲವು ಪತ್ರಿಕೆಗಳು ವರದಿ ಪ್ರಕಟಿಸಿರುವದನ್ನು ಕ್ಷಿತು ಮೈಸೂರು ಸರ್ಕಾರ ಹೇಳಿಕೆ ಹೊರಡಿಸಿ ಆ ಬಗ್ಗೆ ತೀರ್ಮಾನವೇನೂ ಆಗಿಲ್ಲವೆಂದು ತಿಳಿಸಿದೆ

ಬಹುಮಾನ

ಭಾರತ ಕೇಂದ್ರ ತೈಲಬೀಜ ಸಮಿತಿಯವರು ಹೇಳಿಕೆಯೊಂದನ್ನಿತ್ತು, ಮೊಹವ ಬೀಜಕ್ಕಾಗಿ ಕೈಯಿಂದ ಉಪಯೋಗವಾಗುವ ಡಿಕಾರ್ಟಿಕೇಟರನ್ನು ಉತ್ತಮವಾಗಿ ತಯಾರಿಸಿಕೊಡುವವರಿಗೆ 2 ಸಾವಿರ ರೂ. ಬಹುಮಾನ ಕೊಡುವ ಅವಕಾಶವನ್ನು ಮೈಸೂರು ಸರ್ಕಾರಿ ಪ್ರಕಟಣೆ ತಿಳಿಸಿದೆ. ವಿವರಗಳಿಗೆ ನವದೆಹಲಿ ಮಾರ್ಕೆಟಿಂಗ್ ರಸ್ತೆಯಲ್ಲಿರುವ ಜಾಂಸಗರ ಹೌಸಿನ 172 ಕೊಟಡಿಯಲ್ಲಿರುವ ಆಹಾರ ಶಾಖೆಯ ಈ ಸಮಿತಿಗೆ ಬರೆಯಬೇಕು

ಸೋಮನಾಥ ನಿಧಿ

ರೂ 2865866 ರೂ ಸೋಮನಾಥ ಜೀರ್ಣೋದ್ಧಾರ ನಿಧಿಗೆ ಸೇರಿದೆಯೆಂದು ಪ್ರಭಾಸಪಟ್ಟಣದ ವಾರ್ತೆ. ಪ್ರಭಾಸಪಣ್ಣಕ್ಕೆ 50 ಮೈಲು ದೂರವಿರುವ ವಾಸೊಜದ ಬಳಿಗೆ 110 ಎಕರೆ ಭೂಮಿಯನ್ನೂ ಅದರೊಂದಿಗಿರುವ 281 ಎಕರೆ ಸಾಗುವಳಿ ಯೋಗ್ಯ ಭೂಮಿಯನ್ನೂ ಸ್ಥಿರಾಷ್ಟ್ರ ಸರ್ಕಾರ ದೇವಸ್ಥಾನಕ್ಕೆ ಬಿಡುವ ತೀರ್ಮಾನ ಮಾಡಿದೆ

ಭೋಜನಕೂಟ

ಮೈಸೂರು ಪ್ಲಾನಿಂಗ್ ಕಮಿಷನರವರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ಕಮ್ಮ ಮಗಳ ವಿವಾಹ ಸಂದರ್ಭದಲ್ಲಿ ನಿನ್ನೆ ರಾತ್ರಿ ಮೈಸೂರು ರಾಮಾನುಜ ರಸ್ತೆಯಲ್ಲಿಂವ ಶ್ರೀಮನ್ಮಹಾರಾಜರವರ ಛತ್ರದಲ್ಲಿ ಭೋಜನಕೂಟ ಏರ್ಪಡಿಸಿದ್ದರು. ಅಧಿಕಾರಿಗಳು ಮತ್ತು ಗಣ್ಯರು ಆಹ್ವಾನಿತರಾಗಿದ್ದರು.

ಬಂದಿಗಳಿಗೆ ಕ್ರೀಡಾಗೃಹ

ಜೆಚಲಗಡ್ಡದ ಹೈದರಾಬಾದಿನ ಕೇಂದ್ರ ಬಂದೀಖಾನೆಯು ಬಂದಿಗಳ ಸಲುವಾಗಿ ಉಪಾಹಾರ ಅವಧಿ, ಮುದ್ರಿತ ಗಾಯನ, ಪ್ರೌಢ ಶಾಲೆಗಳ ಅನುಕೂಲತೆಗಳನ್ನು ಮಾಡಿಕೊಡುವದಾಗಿ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಎಂ. ಕೆ. ವೆಲ್ಲೋಡಿ ತಿಳಿಸಿದ್ದಾರೆ.

ಅಂತರ ಪ್ರಾಂತ ವಿವಾಹ

ಪ್ರಾಂತೀಯತೆ ವ್ಯಾಧಿಯನ್ನು ನಿಲ್ಲಿಸಲು ಅಂತರ ಪ್ರಾಂತೀಯ ವಿವಾಹಗಳೆಯೋಗ್ಯವೆಂದು ಪ್ರಾಕೀಸ್ತಾನ ಪಾರ್ಲಿಮೆಂಟಸಭೆ ಸದಸ್ಯರೊರ್ವರು ಸುಲಭವಾದ ಉಪಾಯ ಸೂಚಿಸಿರುವದಾಗಿ ಕರಾಚಿ ವಾರ್ತೆ.

ಬಟ್ಟೆಗೆ ಗೋಳು ತಪ್ಪಿಲ್ಲ

ಬೆಂಗಳೂರು — ಇನ್ನು ಮುಂದೆ ಬಟ್ಟೆ ಅಭಾವವೇ ಇಲ್ಲ ; ಪ್ರತಿಯೊಬ್ಬರಿಗೂ 8 ವರೆ ಗಜ ಒಟ್ಟೆಯಂತೆ ಭಾರತ ಸಂಕರದವರು ಮೈಸೂರು ಸಂಸ್ಥಾನಕ್ಕೆ ಬಟ್ಟೆ ಕೋಟಾ ಗೊತ್ತುಮಾಡಿದ್ದಾರೆ ; 4500—5000 ಬೇಲೆ ಒಟ್ಟೆ ಒರುವುದು ; ನಾವು ಸೂಕ್ಷ್ಮ ರೀತಿಯಲ್ಲಿ ಹಂಚಿಕೆ ಮಾಡುತ್ತೇವೆ ಎಂದು ಸಿವಿಲ್ ಸಪ್ಲೈ ಕಂಟ್ರೋಲರ್ ಅಪ್ಪಾಜಪ್ಪನವರು ತಿಳಿಸಿರುವುದಾಗಿ ಬೆಂಗಳೂರು ವರದಿ.

× ಭಾರತಕ್ಕೆ ಗೋಧಿ ಕಳಿಸಲು ಆಸ್ಟ್ರೇಲಿಯ ಬಳಿ ಇಲ್ಲವೆಂದು ಮೆಲ್ಬೋರ್ನ್ ವಾರ್ತೆ

× ಆಚಾರ್ಯ ಕೃಪಾಲಿನಿಯವರು ನಿನ್ನೆ ಮದರಾಸಿನಲ್ಲಿ ಹೇಳಿಕೆಯಿತ್ತು, ಕಾಂಗ್ರೆಸ್ ಶೈಜಿಸುವ ಬಗೆಗೆ ಇನ್ನೂ ತೀರ್ಮಾನ ಮಾಡಿಲ್ಲವೆಂದು ತಿಳಿಸಿದರು. ಆ ಬಗೆಗೆ ತ್ವರಿತವಾಗಿ ಘೋಷಿಸುವದಾಗಿ ತಿಳಿಸಿದರು.

* ವಾಯವ್ಯ ಚೀನದಲ್ಲಿ ರಷ್ಯನರು ಅಣು ಕೆಲಸಕಾರ್ಯಗಳನ್ನು ಪ್ರಾರಂಭಿಸಿರುವದಾಗಿ ಓಕಿಯಾಮ ವಾರ್ತೆ.

† ಮೈಸೂರು ವಿಶ್ವವಿದ್ಯಾನಿಲಯದ ಆನರ್ಸ್ ಮುಂತಾದ ಪರೀಕ್ಷೆಗಳ ಫಲಿತಾಂಶ ಈ ದಿನದ ಪ್ರಕಟನವಾದವು ನಮ್ಮ ಕಚೇರಿಲೂ ನೋಡಬಹುದು.

ಉಡ್‌ಲಾಂಡ್

ಶಿ ಸು

11—5—51 ರಿಂದ ಅಮೋಘ ಪ್ರಾರಂಭ

ಬಿರ್‌ಹ ಕಿ ರಾತ್ Birha ki Raat

ಪಾತ್ರ : ನರ್ಗಿಸ್, ದೇವಾನಂದ್, ಸ್ನೇಹಪ್ರಭಾ, ಓಂಪ್ರಕಾಶ್ (ಹಿಂದಿ ಚಿತ್ರ)

ಸಕಲರೂ ನೋಡಬೇಕಾದ ಮನನೋಹಕ ಚಿತ್ರ — ಪ್ರತಿ ದಿನ 3 ಆಟಗಳು

ರಣಜಿತ್ 11—5—51 ರಿಂದ

SAGAI ನಗಾಯಿ

ರೆಹನಾ, ಯಾಕೂಬ್, ಪ್ರೇಮನಾಥ್, ಗೋಪ್ ಪಾತ್ರವಹಿಸಿರುವ

ಸಂಗೀತ, ನೃತ್ಯ, ಹಾಸ್ಯಲಹರಿಯಿಂದ ಕೂಡಿದ ಅಮೋಘ ಹಿಂದೀ ವಾಕ್ಚಿತ್ರ

— ಪ್ರತಿ ದಿನ 3 ಪ್ರದರ್ಶನಗಳು —

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

ಸಂಪುಟ ೯ ಸಂಚಿಕೆ ೩೫ ॥ ಶ್ರೀ ॥ ತಾ॥ 14-5-1951

— ಪ್ರ ಬೋ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಶೃಙ್ಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟಣಮಾಲೆ —
ಸಂಪಾದಕ; ಗುಂಡ್ಕಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ವರ್ಣಾಂತರೀಕರಣ

ಜನ್ಮ-ಕರ್ಮಗಳೆಂಡರಿಂದಲೂ ವರ್ಣಗಳು ವ್ಯವಸ್ಥಿತವಾಗುತ್ತವೆ ಜನ್ಮಕ್ಕನುಸಾರವಾಗಿಯೇ ಕರ್ಮಗಳೂ, ಕರ್ಮಗಳನ್ನನುಸರಿಸಿಯೇ ಪುನಃ ಜನ್ಮಗಳೂ ಆಗುತ್ತಿರುತ್ತವೆ : ಮತ್ತು ಪ್ರತಿಯೊಂದು ವರ್ಣದಲ್ಲಿ ಪೂರ್ಣತ್ವವು ಜನ್ಮಕರ್ಮಗಳೆಂಡೂ ಪೂರ್ಣವಾದಾಗಲೇ ಬರಬೇಕಿಲ್ಲದು. ಯಾವ ವರ್ಣದಲ್ಲಿ ಜನ್ಮವಾಗುವುದೋ, ಅದಕ್ಕನುಗುಣವಾಗಿ ಕರ್ಮವನ್ನು ಮಾಡುವುದೇ ಪ್ರಕೃತಿಗೆ ಅನುಕೂಲವಾದುದು ; ಇದರಿಂದ ಕ್ರಮೋನ್ನತಿಯಾಗಿ ಮುಂದಿನ ಜನ್ಮದಲ್ಲಿ ಉಚ್ಚ ವರ್ಣವು ಪ್ರಾಪ್ತವಾಗುತ್ತದೆ ಅದುದರಿಂದ ಪ್ರಾರಬ್ಧ ಸಂಸ್ಕಾರಕ್ಕನುಕೂಲವಾಗಿಯೇ ಉನ್ನತಿ ಹೊಂದತಕ್ಕ ಕ್ರಮಶಃ ಜನ್ಮಜನ್ಮಾಂತರದಲ್ಲಿ ಉಚ್ಚ ವರ್ಣಗಳನ್ನು ಪಡೆಯುವೆಂಬುದು ಸಾಮಾನ್ಯ ರೀತಿಯಾಯಿತು ; ಆದರೆ ಮನುಷ್ಯನಲ್ಲಿಯೋಗಾದಿ ಅಸಾಧಾರಣ ಪುರುಷಾರ್ಥವನ್ನು ಮಾಡುವ ಶಕ್ತಿಯೂ ಕರ್ಮವನ್ನು ಮಾಡಲು ಸ್ವಾತಂತ್ರ್ಯವೂ ಇರುವುದರಿಂದ ಆತನು ತನ್ನ ಪುರುಷಾರ್ಥದಿಂದ ಒಂದೇ ಜನ್ಮದಲ್ಲಿ ಉಚ್ಚವರ್ಣವನ್ನು ಪ್ರಾಪ್ತಿಸಿಕೊಳ್ಳಬಹುದು.

' ನ ವಿಶೇಷೋಽಸ್ತಿ ವರ್ಣಾನಾಂ ಸರ್ವಂ ಬ್ರಾಹ್ಮಮಿದಂ ಜಗತ್ ।
ಬ್ರಹ್ಮಣಾ ಪೂರ್ವಸೃಷ್ಟಂ ಹಿ ಕರ್ಮಭಿರ್ವರ್ಣತಾಂ ಗತಮ್ ॥ '

ಮುಂತಾದ ಮಹಾಭಾರತದ ವಚನದಂತೆ ಸೃಷ್ಟಿಯ ಪ್ರಥಮ ದಶೆಯಲ್ಲಿ ಕೇವಲ ಬ್ರಾಹ್ಮಣರು ಮಾತ್ರ ಇದ್ದರು. ಅವರ ಕರ್ಮದಲ್ಲಿ ವ್ಯತ್ಯಾಸಬಂದುದರಿಂದಲೇ ವರ್ಣವು ವರ್ಣಗಳ ವ್ಯವಸ್ಥೆಯನ್ನು ನಿರ್ಮಿಸಬೇಕಾಯಿತು. ಇದರಿಂದ ಈ ರೀತಿ ವರ್ಣವ್ಯವಸ್ಥೆಯು ಅಸಾಧಾರಣ ಕರ್ಮದ ಫಲವೇ ಆಗಿತ್ತೆಂದೂ, ಅದು ಸ್ವಭಾವವು ಸ್ಥೂಲ ಶರೀರವನ್ನು ಸಹ ಕೆಡಿಸಿ ಕ್ಷತ್ರಿಯಾದಿ ಕರ್ಮಗಳನ್ನು ನಿರ್ಮಿಸಿತೆಂದೂ ತಿಳಿಯಬಹುದು. ಇದರಂತೆಯೇ ಅಸಾಧಾರಣವಾದ ಉತ್ಕಟ ಕರ್ಮವನ್ನು ಮಾಡುವುದರಿಂದ ವಿಶ್ವಾಮಿತ್ರನು ಕ್ಷತ್ರಿಯನಿಂದ ಬ್ರಾಹ್ಮಣನಾದಂತೆ ಒಂದೇ ಜನ್ಮದಲ್ಲಿ ಉತ್ಕೃಷ್ಟವರ್ಣವೂ ಸಿಗಬಹುದು.

ಇಂದೀಗ ಜನರು ವರ್ಣವ್ಯವಸ್ಥೆಯನ್ನು ತಿಳಿಯದೆ ಎಲ್ಲರೂ ವಿಶ್ವಾಮಿತ್ರರಾಗತೊಡಗಿರುವರಲ್ಲದೆ ಕರ್ಮದಿಂದ ವಿಶ್ವಾಮಿತ್ರನು ಬ್ರಾಹ್ಮಣನಾಗಿದ್ದುದರಿಂದ ಕರ್ಮವನ್ನೇ ಮುಖ್ಯವೆಂದು ಬಗೆದು ಜನ್ಮವನ್ನು ಬದಿಗೊತ್ತಹತ್ತಿರುವರು ಅವರ ಈ ಸಿದ್ಧಾಂತಕ್ಕೆ ಭ್ರಾಂತಿಯೇ ಕಾರಣ, ಏಕೆಂದರೆ ಪ್ರಕೃತಿಗೆ ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಮೂರು ಅಂಗಗಳಿರುವುದರಿಂದ, ಪ್ರತಿಯೊಂದು ವರ್ಣದಲ್ಲಿಯೂ ಶರೀರವು ಅಂದರೆ ಜನ್ಮವೂ ಕರ್ಮವೂ ಜ್ಞಾನವೂ ಪೂರ್ಣವಾದಾಗಲೇ ಅಯಾ ವರ್ಣಗಳು ಪೂರ್ಣವಾಗಬಲ್ಲುವು ; ಈ ಮೂರರಲ್ಲಿ ಒಂದು ಕಮ್ಮಿಯಾಗುವುದರಿಂದ ವರ್ಣದಲ್ಲಿಯೂ ಸ್ಖಲನತೆಯುಂಟಾಗುವುದು. ಈಗ ವಿಚಾರಿಸಬೇಕಾದುದೇನೆಂದರೆ, ವಿಶ್ವಾಮಿತ್ರನು ಬ್ರಾಹ್ಮಣತ್ವವನ್ನು ಪಡೆದುದು ಕೇವಲ ಕರ್ಮದ ಪರಿವರ್ತನೆಯಿಂದಲೇ ಅಥವಾ ಅದರೊಂದಿಗೆ ಸ್ಥೂಲ ಶರೀರದ ಸಂಬಂಧವೂ ಇದ್ದಿತೇ ಎಂದು.

ವಿಶ್ವಾಮಿತ್ರನ ಉತ್ಪತ್ತಿಯಲ್ಲಿ ತಂದೆಯ ಅಂಶವು ಬ್ರಾಹ್ಮಣನದಾಗಿದ್ದಿತೆಂದೂ, ತಾಯಿಯ ಅಂಶವು ಪೂರ್ತ ಕ್ಷತ್ರಿಯನದಾಗಿತ್ತೆಂದೂ ಪುರಾಣವನ್ನೋದಿದವರು ಬಲ್ಲರು : ಆದುದರಿಂದ ವಿಶ್ವಾಮಿತ್ರನು ಮುಂಜಿನಿಂದಲೇ ಅರ್ಧ ಬ್ರಾಹ್ಮಣನಾಗಿದ್ದನು ; ಆದರೆ ತಾಯಿಯ ಅಂಶವು ಕ್ಷತ್ರಿಯ ಸಂಬಂಧವಳೆದ ಕಾರಣ, ಸ್ಥೂಲಶರೀರದಲ್ಲಿದ್ದ ಕ್ಷತ್ರಿಯಾಂಶವನ್ನು ಪರಿವರ್ತನೆಗೊಳಿಸುವುದ ಶಕ್ತಿಗಾಗಿ ಆತನು ಅನೇಕ ವರ್ಷಗಳವರೆಗೆ ಅಸಾಧಾರಣವಾದ ತಪಸ್ಸನ್ನಾಚರಿಸಿದನು. ತಪಸ್ಸಿನ ಪ್ರಭಾವವು ಬರೀ ಮನಸ್ಸಿನ ಮೇಲೆ ಮಾತ್ರವೇ ಅಲ್ಲದೆ ಶರೀರದ ಮೇಲೆಯೂ ಬಿದ್ದು, ಅದರ ಅಣುಪರಮಾಣುಗಳನ್ನು ಮಾರ್ಪಡಿಸಿ ಹಾಕುತ್ತದೆಂಬುದನ್ನು ಎಲ್ಲರೂ ಅರಿತಿರುವರು. ವಿಶ್ವಾಮಿತ್ರನ ವಿಷಯದಲ್ಲಿಯೂ ಹಾಗೆಯೇ ಆಗಿದ್ದಿತು ; ಅಂದರೆ ಅಸಾಧಾರಣ ಕರ್ಮಗಳ ಮೂಲಕ ಆತನು ಸ್ಥೂಲಶರೀರವನ್ನು ಸಹ ಪರಿವರ್ತನೆಗೊಳಿಸಿ ಅದೇ ಜನ್ಮದಲ್ಲಿ ಮೂರು ಶರೀರಗಳಿಂದ ಬ್ರಾಹ್ಮಣನಾಗಿಬಿಟ್ಟಿದ್ದನು. ಇದು ಅಸಾಧಾರಣ ಕರ್ಮದ ಮಾತು.

ಸ್ಥೂಲಶರೀರವು ಒದಲಾಗಿ ಒಂದು ವರ್ಣದಿಂದ ನಾಲ್ಕು ವರ್ಣವೂ ಪ್ರಾಪ್ತವಾಗುವುದೇನೂ ಅಸಾಧಾರಣ ಕರ್ಮದ ವಿಷಯವಾಗುದರಿಂದ ಸಾಧಾರಣ ನಿಯಮದಲ್ಲಿ ಅಥವಾ ವರ್ಣವ್ಯವಸ್ಥೆಯಲ್ಲಿ ವಿಶ್ವಾಮಿತ್ರನ ದೃಷ್ಟಾಂತವನ್ನು ಕೊಡಲಾಗುವಂತಿಲ್ಲ. ಸಾಧಾರಣ ನಿಯಮವು ಸಾಧಾರಣ ಕರ್ಮದ ವಿಚಾರದಿಂದ ಸಾಧಾರಣ ಪ್ರಕೃತಿಯನ್ನು ನೋಡಿ ಆಗುತ್ತಿರುತ್ತದೆ ; ಇದರಿಂದ ಮೂರು ಶರೀರಗಳು ಮೆಲ್ಲಮೆಲ್ಲದೆ ಉನ್ನತವಾಗಿ ಕ್ರಮಶಃ ಉಚ್ಚವರ್ಣವು ಪ್ರಾಪ್ತವಾಗುತ್ತದೆ ವಿಶ್ವಾಮಿತ್ರನು ಪ್ರಪಂಚದಲ್ಲೀವರೆಗೆ ಒಬ್ಬನೇ ಆಗಿರುವುದರಿಂದ ಅತನ ದೃಷ್ಟಾಂತವನ್ನು ಎಲ್ಲರೂ ಹಿಡ್ಕುವುದೂ ಇದೇ ನೆಪದಿಂದ ವರ್ಣವ್ಯವಸ್ಥೆಯನ್ನು ಭ್ರಷ್ಟಗೊಳಿಸುವುದೂ ಪೂರ್ಣ ಅಜ್ಞಾನ ಹಾಗೂ ಭ್ರಾಂತಿ ಮಾತ್ರವಾಗಿದೆ. ಕೆಲಕೆಲವೆಡೆಯಲ್ಲಿ ವಿಶ್ವಾಮಿತ್ರನ ಹೆಸರಿನಿಂದ ಅದಾವ ಶುದ್ಧಿಪದ್ಧತಿಯು ಹೊರಟಿದೆಯೋ ಅದೂ ಇಂತಹದೇ ಭ್ರಾಂತಿಜ್ಞಾನದ ಮೇಲೆ ಪ್ರತಿಷ್ಠಿತವಾಗಿದೆ. ಏಕೆಂದರೆ ಇದರ ಮೇಲೆ ಪೂರ್ವ ಸಿದ್ಧಾಂತಾನುಸಾರವಾಗಿ ವಿಚಾರಮಾಡಿದಲ್ಲಿ ಸ್ಪಷ್ಟವಾಗುವುದೇನೆಂದರೆ ವಿಶ್ವಾಮಿತ್ರನು ಸಾವಿರಾರು ವರ್ಷಗಳವರೆಗೆ ಅದಾವ ಸ್ಥೂಲ ಶರೀರವನ್ನು ಶುದ್ಧಿಮಾಡಿಕೊಂಡಿದ್ದನೋ, ಅದು ಒಂದೊಂದು ಹೋಮದ ಮೂಲಕ ವಾಯುಶುದ್ಧಿಯನ್ನಾಗಲಿ ವಂಶೋಜ್ಜೀವನೆಯನ್ನಾಗಲಿ ಮಾಡುವುದರಿಂದ ಆಗಲಾರದೆಂಬುದನ್ನು ವಿಚಾರವಂತರಾದ ಪುರುಷರು ಚೆನ್ನಾಗಿ ತಿಳಿಯಬಲ್ಲರು.

[ಸಶೇಷ

ಶ್ರೀ ದ್ವಾರಕಾ ಜಗದ್ಗುರುಗಳವರು

(ಸ್ವಂ. ಸು ತಂತಿ)

ಆದು ವಿ 7 — ಕಾನ್ಪುರದಲ್ಲಿ ಧರ್ಮಸಂಘ ಕಾರ್ಯಕಲಾಪಗಳನ್ನು ಮುಗಿಸಿಕೊಂಡು, ಶ್ರೀ ದ್ವಾರಕಾ ಜಗದ್ಗುರುಗಳವರು ಡಿಲ್ಲಿ, ಅಂಬಾಜಿ, ಅಹಮದಾಬಾದಿಗೆ ಭೇಟಿ ಕೊಟ್ಟು, ಮೌಂಟ್ ಅಬೂವಿಗೆ ಆಗಮಿಸಿದರು. ಪ್ರಭಾಸ್ ಪಟನ್ನಲ್ಲಿ ಶ್ರೀ ಸೋಮನಾಥ ಪ್ರತಿಷ್ಠಾ ಸಮಾರಂಭಕ್ಕೆ ಶ್ರೀ ಜಗದ್ಗುರುಗಳವರು ಸ್ವಾಗತಿಸಲ್ಪಟ್ಟಿರುವರು ; ಆದರೆ ಸಮಾರಂಭ ಮತ್ತು ಪೂಜೆಯು ವೇದೋಕ್ತ ಮತ್ತು ಪ್ರಾಚೀನ ಪದ್ಧತಿ ರೀತ್ಯಾ ಇರುವುದೆಂಬುದರ ಒಗ್ಗೆ ಭರವಸೆ ದೊರೆಯಲಿಲ್ಲವಾಗಿ ಸಮಾರಂಭಕ್ಕೆ ಶ್ರೀ ಶ್ರೀಗಳವರು ದಯಮಾಡಿಸುವುದಿಲ್ಲ. ಶ್ರೀ ಜಗದ್ಗುರುಗಳವರು ಶ್ರೀ ಶಂಕರ ಜಯಂತಿಯನ್ನು ತಾ॥ 11 ನೇ ಶುಕ್ರವಾರ ಮೌಂಟ್ ಅಬೂವಿನಲ್ಲಿ ರಘುನಾಥಜಿ ಮಂದಿರದಲ್ಲಿ ವೈಭವದಿಂದ ನೆರವೇರಿಸುವರು.

Edited, Printed and Published by M. S. Krishna Rao, at the Satyavadi Press Chamarajapuram Mysore

ಕೊಗಾನೂ ಅಹಿಂಸೆಯೂ

ಶ್ರೀ ಮಹಮದ ಪೈಗಂಬರವರು ಅಹಿಂಸಾತತ್ವದ ಹೆಚ್ಚು ಪ್ರೇಮಿಗಳಾಗಿದ್ದರು ಯಾವ ಒಗೆಯಲ್ಲಾಗಲೀ ಜನರಿಗೆ ತೊಂದರೆಯನ್ನು ಕೊಡುವುದಾಗಲೀ ಅಥವಾ ಯಾವ ಪ್ರಾಣಿಯನ್ನಾಗಲೀ ನಾಶಮಾಡುವುದಾಗಲೀ ಅವರಿಗೆ ಇಷ್ಟವಿಲ್ಲ. ಪೈಗಂಬರವರು ಹೀಗೆ ಹೇಳಿದ್ದಾರೆ— ಒಬ್ಬನು ಒಂದು ಗುಬ್ಬಚ್ಚಿಯನ್ನು ಕೊಂದಲ್ಲಿ ಅದು ಗೋವಿಯಿಟ್ಟದ ಎಬ್ಬಿಸಲ್ಪಟ್ಟಾಗ 'ಓ ನನ್ನ ಒಡೆಯನೇ! ಫಲಾನಿ ಮನುಷ್ಯನು ನನ್ನನ್ನು ಕೊಂದನು' ಎಂದು ಹೇಳಿಕೆ ಕೊಡುತ್ತದೆ. 'ಪ್ರಾಣದೊಂದಿಗಿರುವ ಪ್ರಾಣಿಗಳನ್ನು ತುಪಾಕಿಯ ಗುರಿಯಿಟ್ಟು ಕೊಲ್ಲಬೇಡ; ಮೂಕ ಪ್ರಾಣಿಗಳನ್ನು ಕ್ರಾರ್ಯದಿಂದ ಕಂಡವರ ವಿಷಯದಲ್ಲಿ ವಿಶೇಷ ರೀತಿಯಲ್ಲಿ ಜಡ್ಜ್‌ಮೆಂಟಿನ ದಿನ ವಿಚಾರಣೆಯಾಗುತ್ತದೆ.

ಗೋವಧೆಯಿಂದಾಗುವ ಪರಿಣಾಮವೇನು ?

ವಿದ್ಯುಲ್ಲತೆಯ ಮೇಲೆ ಅಂದರೆ ವಿದ್ಯುತ್ ಪ್ರವಹಿಸುತ್ತಿರುವಾಗ ಅದರ ಮೇಲೆ ಕೈಹಾಕಿದಲ್ಲಿ ಆ ವಿದ್ಯುತ್ ಅತನ ತೇಜಸ್ಸನ್ನು ಎಳೆದು ನಿರ್ವೀರ್ಯನನ್ನಾಗಿ ಮಾಡಿ ನಾಶಗೊಳಿಸುತ್ತದಷ್ಟೆ! ಆದೇ ಒಗೆಯಲ್ಲಿ ವಿದ್ಯುತ್‌ಪ್ರಕಾಶವಾರ್ತಿಯಾದ ಗೋಮಾತೆಯ ಮೇಲೆ ಕೈಮಾಡುವವರ ದುರ್ಗತಿಯೂ ಅಷ್ಟೇ! ವಿದ್ಯುತ್ ತಂತಿಯು ಕ್ಷಣ ನಾಶಮಾಡುತ್ತದೆ. ಗೋಮಾತೆಯು ಕರುಣಾಮೂರ್ತಿಯಾದುದರಿಂದ ಕೂಡಲೇ ತೊಂದರೆಯುಂಟಾಗುವುದಿಲ್ಲ. ಇಷ್ಟೇ ವೈತ್ಯಾಸ. ಗೋಹಿಂಸಕರೂ, ಗೋವಧೆಮಾಡುವವರೂ, ಗೋವಿನ ಅಭಿವೃದ್ಧಿ ವಿಷಯದಲ್ಲಿ ಉತ್ಸಾಹವಿಲ್ಲದವರೂ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ನಡೆದಲ್ಲಿ ಭಾರತಭೂಮಿಯು ಸದಾಪುಣ್ಯಭೂಮಿಯಾಗಿ ಬೆಳಗಬಲ್ಲದು.

(ಓಂ)

ಮಾಂಸಾಹಾರದ ವಿಷಯದಲ್ಲಿ

ಶ್ರೀ ತಿರುವೆಳ್ಳುವಾರ್‌ರವರ ಉಪದೇಶ

1 ಎತೊಂದು ಪ್ರಾಣಿಯನ್ನು ಆಹಾರವಾಗಿ ತಿನ್ನವರಿಗೆ ದಯೆಯೆನ್ನುವುದು ಎಲ್ಲಿಂದ ಬರಬೇಕು?

2 ದುಂದುಗಾರನು ಏನನ್ನೂ ಕೂಡಿಡಲಾಗದಂತೆ, ಮಾಂಸಭಕ್ಷಕನ ಹೃದಯದಲ್ಲಿ ದಯೆಯೆನ್ನುವುದು ನೆಲೆಸಿರಲಾರದು

3 ಪ್ರಾಣಿವಧೆಯು ಕ್ರೌರ್ಯವು; ಮಾಂಸಭಕ್ಷಣೆಯು ಪಾಪವು.

4 ಮಾಂಸಭಕ್ಷಣಾ ತ್ಯಾಗದಿಂದಲೇ ಜೀವನ ಏಳಿಗೆಯಾಗುವಿಕೆ; ಮಾಂಸಾಹಾರಿಗೆ ನರಕವೇ ಶರಣ್ಯವು

5 ವಧೆಶಾಲೆಗಳಲ್ಲಿ ಪ್ರಾಣಿಗಳು ಪಡುವ ಕಷ್ಟವನ್ನು ಒಂದು ಬಾರಿ ಅವಲೋಕಿಸಿದಲ್ಲಿ ಮಾಂಸಭಕ್ಷಣೆಯು ಎಷ್ಟು ಹೇಯವಾದುದೆಂಬುದರ ಅರಿವೆಯಾಗುವುದು.

6 ಅಜ್ಞಾನ ಬಂಧನದಿಂದ ಬಿಡುಗಡೆಯನ್ನು ಹೊಂದಿದವರು ಎಂದೆಂದಿಗೂ ಮಾಂಸಾಹಾರವನ್ನು ಸೇವನೆಮಾಡರು

7 ಮಾಂಸಾಹಾರಿಗೆ ಸರ್ವ ಪ್ರಾಣಿಗಳಲ್ಲಿಯೂ ಪರಮಾತ್ಮನು ನೆಲೆಸಿರುವನೆಂಬ ಅರಿವು ಉಂಟಾಗುವುದಿಲ್ಲ: ದಯಾಶೂನ್ಯನಿಗೆ ಪರಮಾತ್ಮನ ದಯೆಯು ಹೇಗೆ ಲಭಿಸೀತು!

8 ಮಾಂಸಾಹಾರವು ವ್ಯಾಧಿಗಳನ್ನು ಸುಲಭವಾಗಿ ಹುಟ್ಟಿಸುವುದು: ಅದುದರಿಂದ ಮನೋನಿರ್ಮಲತೆಗೆ, ಮನೋದೃಢತೆಗೆ ಅಡಚಣೆಯಾದದ್ದು; ರೋಗಿಗೆ ಸತ್ವದ ಸುಖವು ಹೇಗೆ ದೊರೆತೀತು?

9 ಯಾವ ಪ್ರಾಣಿಯನ್ನು ಕೊಂದಾದರೂ ವಿಷ್ಣುವನ್ನು ಕೊಂದಂತೆಯೇ.

(ಓಂ)

ಮಾನವನ ಒಂದು ವರ್ಷದ ಕಾರ್ಯ

ಅಲ್ಫೆಡ್ ಅರ್ಕಾಸ್‌ರವರು ಹೀಗೆ ಹೇಳಿದ್ದಾರೆ— ಪ್ರತಿ ಮನುಷ್ಯನೂ ಒಂದು ವರ್ಷದಲ್ಲಿ 116 ಲಕ್ಷ ಪದಗಳನ್ನುಚ್ಚರಿಸುತ್ತಾನೆ 1200 ಬಾರಿ ಪೇಕ್ ಹ್ಯಾಂಡು ಕೊಡುತ್ತಾನೆ (ಈ ಶಕ್ತಿಯು ಎಂಟು ಟನ್ನುಗಳ ಇಂಜನ್ನು ಮೇಲಕ್ಕೆತ್ತಲು ಸಾಕಾಗುತ್ತದೆ). ಕಣ್ಣುಎರಿಗಳನ್ನು 946 ಲಕ್ಷ ಬಾರಿ ಎತ್ತುತ್ತಾನೆ ಹೊಗೆಯನ್ನು ಸೇವಿಸುವವನಾಗಿದ್ದಲ್ಲಿ 7040 ದೀಪದಕಡ್ಡಿಗಳನ್ನು ಹಚ್ಚುತ್ತಾನೆ, ಲಂಡನ್ನಿನಿಂದ ಕಾರ್ಕ್‌ಸ್ಟೆಂಟನೋಪಲ್‌ವರೆಗೆ ಇಂಥವಷ್ಟು ದೂರ ನಡೆಯುತ್ತಾನೆ.

ಎಷ್ಟು ದೊಡ್ಡ ಮರ

ಪ್ರಪಂಚದಲ್ಲೆಲ್ಲಾ ದೊಡ್ಡ ಮರವು ಮೆಕ್ಸಿಕೋನಲ್ಲಿದೆ; ಅದರ ವ್ಯಾಸ 52 ಅಡಿ; ಮತ್ತು ಎತ್ತರ 250 ಅಡಿ.

ಕತ್ತಲೆಯಿಂದ ಬೆಳಕಿಗೆ! — ಮಹಮ್ಮದೀಯರ ಪಾತ್ರ

ನವದೆಹಲಿ— 'ಮಾನವ ಲೋಕವನ್ನು ಇಂದಿನ ಅಂಧಕಾರದಿಂದ ಪಾರು ಮಾಡಿ ದಿವ್ಯ ಪ್ರಕಾಶದತ್ತ ಕೊಂಡೊಯ್ಯಲು, ಭಾರತದಲ್ಲೆಲ್ಲಾ ನೆಲೆಗೊಂಡಿರುವ ಮಂತ್ರ-ಮಾಸ್ತ್ರಗಳು, ಮಂದಿರಗಳು, ಧರ್ಮಸ್ಥಾನಗಳು ಕೇವಲ ಸೇವಾ ಸಂಸ್ಕೃತಿ ತತ್ವಜ್ಞಾನಗಳ ಪ್ರಸಾರಕೇಂದ್ರಗಳಾಗಬೇಕು; ಇಂತಹ ಸಾಂಸ್ಕೃತಿಕ ತಾತ್ವಿಕ ಮಹಾಜಾಗೃತಿ ವುನಃ ನಿಮ್ಮಲ್ಲಿ ಬೆಳಗಬೇಕಾಗಿದೆ' ಎಂಬದಾಗಿ ಏಪ್ರಿಲ್ ತಿಂಗಳಾಂತ್ಯದಲ್ಲಿ ಇಲ್ಲಿ ಕೂಡಿದ ಅ. ಭಾ. ಸಾಧುಗಳ ಸಮ್ಮೇಳನದಲ್ಲಿ ಭಾಷಣಮಾಡುತ್ತಾ ಶ್ರೀ ರಾಯಚೂರ ಸ್ವಾಮಿಗಳು ಹೇಳಿದರು; ಈ ಸಮ್ಮೇಳನಕ್ಕೆ ಸುಮಾರು ಮೂರು ಲಕ್ಷ ಜನರು ಬಂದಿದ್ದರೆಂದು ಹೇಳಲಾಗಿದೆ.



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

SHAKTI SUDHA

A Superb Tonic

ವಾರ್ತೆಗಳು

ಕೆಂಪು ಚೀಣಾವಿಗೆ ರಬ್ಬರ್ ಸರಬರಾಜು ಮಾಡುವದನ್ನು ಸಿಲೋನ್ ನಿಶೇಧಿಸಲಾರದೆಂದು ಕೊಲಂಬೊ ವರದಿ

ಮಿತ್ರ ರಾಜ್ಯಗಳಿಗೆ ನ್ಯೂಸ್‌ಪ್ರಿಂಟ್ ಸರಬರಾಜು ಮಾಡುವ ತಾತ್ಕಾಲಿಕ ಯೋಜನೆಯನ್ನು ಅಮೇರಿಕ ಸರ್ಕಾರ ಮಾಡಿರುವದಾಗಿ ವಾಷಿಂಗ್ಟನ್ ವಾರ್ತೆ ಸಹಾಯಕ್ಕೆ ಅರ್ಹವಿರುವ ರಾಷ್ಟ್ರಗಳಿಂದರೆ ಕಮ್ಯುನಿಸ್ಟ್ ಆಕ್ರಮಣ ಬಿದ್ದಿರುವ ಪ್ರದೇಶಗಳು.

ಆಸ್ಟ್ರೇಲಿಯದ ವಿದೇಶ ವ್ಯವಹಾರಗಳ ಸಚಿವ ಕ್ಯಾಸೆಯವರು ನೆಲ್ಬೊರ್ನ್‌ನಲ್ಲಿ ಹೊರಡಿಸಿದ ಹೇಳಿಕೆಯಲ್ಲಿ ಭಾರತದ ಬರ ತಡೆಯಲು ಧಾನ್ಯ ಕಳುಹಿಸಲು ಸಿದ್ಧವಿರುವದಾಗಿ ವ್ಯಕ್ತಪಡಿಸಿರುವರು.

ಇದೇ 1 ನೇ ತಾ|| ಸಂಜೆ 7 ಗಂಟೆಯಲ್ಲಿ ಪಾಕಿಸ್ತಾನ ಸೇನೆಗಳು ಅಫ್ಘಾನಿಸ್ತಾನದ ಮೇಲೆ ಧಾಳಿ ಮಾಡಿದವೆಂದು ದೆಹಲಿ ವಾರ್ತೆ

ಇನ್ನೊಂದು ವಾರದಲ್ಲಿ ಮೈಸೂರು ರುಸಚಿವ ಮಂಡಲ ವಿಸ್ತರಣ ಬಗೆಗೆ ಪೂರ್ಣವಾಗಿ ಗೊತ್ತಾಗುವದೆಂದು ಶ್ರೀ ಕೆ ಸಿ ರೆಡ್ಡಿ ತಿಳಿಸಿರುವರು ಸಚಿವ ಮಂಡಲದಲ್ಲಿ ಕೆಲಸ ಖಾಲಿ ಇಲ್ಲವೆಂದು ಸಹಾ ಅವರು ತಿಳಿಸಿರುವರು

× ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದಿಂದ ಶ್ರೀ ಕಾವಿ.ತ್'ರನು ಹೊರ್ದೂಡದೆ ಎಚ್ಚರಿಕೆ ಕೊಡಲಾಗುವದೆಂದು ದೆಹಲಿ ವಾರ್ತೆ

ಬೆಂಗಳೂರಿನಲ್ಲಿ ಅಕಾರ ಕಚೇರಿ ಕೆಲಸ ಕಲಿಕೆಗಾಗಿ ಶಾಲೆ ಸ್ಥಾಪನೆಯಾಗ್ಲಿದೆ.

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿ ಮಿ ಟೆ ಡ್
ಮಲ್ಲೇಶ್ವರಂ ಪೋಸ್ಟ್ ಬೆಂಗಳೂರು 3

ಶ್ರೇಷ್ಠ ತೆರಿಗೆ ಹೆಗ್ಗುರುತು

ಗ್ರೈಪ್ ಸಿರಪ್

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

For Quality Printing
L. N. Press
Sivarampet, Mysore

Kann. (Eng. 467)

ಒಂದು ಸ್ವರ್ಣ ಮಹೋತ್ಸವ

1949 ರಲ್ಲಿ ಲಂಡನ್ನಿನ ಆರೋಗ್ಯ ಮತ್ತು ಉಷ್ಣವಲಯದ ಔಷಧದ ಸ್ಕೂಲಿನ 50 ನೇ ವಾರ್ಷಿಕೊತ್ಸವವು ಜರುಗಿತು. ಈಗ ಬ್ಲೂಮ್ಸ್‌ಬರಿಯಲ್ಲಿರುವ ಈ ಸ್ಕೂಲಿನ ವಿಶ್ವಮುಖ್ಯತೆಯು ಬಹಳ ಹೆಚ್ಚಾಗಿದ್ದು, ಅದಂಲ್ಲೂ ಉಷ್ಣವಲಯ ದೇಶಗಳ ಅಭಿವೃದ್ಧಿಯ ಬಗ್ಗೆ ಅದರಿಂದ, ಈ ವಿಷಯವು ಗಮನಿಸಲ್ಪಡದೇ ಹೋಗಲಿಲ್ಲ. ಇಲ್ಲಿಗೆ ವಿದ್ಯಾರ್ಥಿಗಳು ಕೇವಲ ಬ್ರಿಟನ್ನಿನಿಂದ ಬರುವುದು ಮಾತ್ರವಲ್ಲ, ಇತರ ದೇಶಗಳಿಂದಲೂ ಒರುವರು. ರೋಗಗಳ ಮೇಲಿನ ಕದನದಲ್ಲಿ ಬೇಕಾದಷ್ಟು ಮಾಡಬೇಕಾಗಿರುವುದರಿಂದ, ಈ ಸ್ಕೂಲಿನ ಕಾರ್ಯ ಪೂರ್ತಿ ಮುಗಿದಂತಿಲ್ಲ ; ಆದರೆ ಬಹುಮಟ್ಟಿಗೆ ನೆರವೇರಿದೆ ಈ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗಗಳ ಮೇಲೆ ನಡೆಸಲಾದ ಭಾರಿ ಚೆಳವಳಿಗಳು ನಮ್ಮ ವಸದಲ್ಲಿದೆ : ಉದಾಹರಣೆಗಾಗಿ ಮಲೇರಿಯಾ ಮೇಲಿನದು. ಮುಂಜರಿಯುತ್ತಿರುವ ವಿಜ್ಞಾನ ಮತ್ತು ಸುಧಾರಿಸಲ್ಪಡುತ್ತಿರುವ ಆರೋಗ್ಯ ಸ್ಥಿತಿಗಳಿಗೆ ವಂದನೆಗಳ ; ಅನೇಕ ದೇಶಗಳಲ್ಲಿ ಮಲೇರಿಯಾದಿಂದ ನಂಳುವನರ ಸುಖ್ಯೆ ಬಹುಮಟ್ಟಿಗೆ ಕಡಮೆಯಾಗಿದೆ. ಸಂಯುಕ್ತ ಅಮೇರಿಕಾ ಬ್ರಿಟಿಷ್ ಗಯಾನಾ, ಇಟಲಿ ಮತ್ತು ಇತರ ಅನೇಕವನ್ನು ನಾವು ಮುಖ್ಯವಾಗಿ ನಮೂದಿಸುತ್ತೇವೆ. ಇತರ ಅನೇಕ ದೇಶಗಳಲ್ಲಿ; ಅಂದರೆ ಗ್ರೀಸ್, ಮಾರಿಷಸ್, ಸಿಲೋನ್, ಪಾಕಿಸ್ತಾನ, ಇಂಡಿಯ) ಅರ್ಜಂಟೈನ್, ಬ್ರೆಜಿಲ್ ಮೊದಲಾದ ಸ್ಥಳಗಳಲ್ಲಿ ರಾಷ್ಟ್ರದ ಅಭ್ಯುದಯದ ಮೇಲಿನ ತಂತ್ರಿಶಕ್ತಿಯ ಮೇಲೆ ಚಟ್ಟುವಟಿಕೆ ಕದನದಲ್ಲಿ ಸೇರಿವೆ ಆರೋಗ್ಯ ಮತ್ತು ಔಷಧದ ಸ್ಥಿತಿ ಅಷ್ಟು ಉತ್ತಮವಿಲ್ಲದ ಆಫ್ರಿಕಾ ವಿಷಯದಲ್ಲಿ ಪ್ರಪಂಚ ಆರೋಗ್ಯ ಸಂಸ್ಥೆಯು ಹೆಚ್ಚಿನ ಅಶಾದಾಯಕ ಯೋಜನೆಯನ್ನು ಹೊಂದಿದೆ.

ಹಳದಿಜ್ವರ ಸಂಬಂಧದ ಸಾಂಕ್ರಾಮಿಕ ರೋಗವು ನಿರ್ನಾಮಮಾಡಲ್ಪಟ್ಟಂತೆ, ಒಂದು ಪೀಳಿಗೆಯಲ್ಲಿ ಪ್ರಪಂಚವು ಮಲೇರಿಯಾದಿಂದ ಪಾರಾಗಬಹುದೆಂದು ವಿಜ್ಞಾನಪ್ರಪಂಚದ ಪ್ರಮುಖ ವ್ಯಕ್ತಿಗಳ ಅಭಿಪ್ರಾಯವಾಗಿದೆ.

ಈ ಸಂದರ್ಭದಲ್ಲಿ ಮಾಜಿ ಲೀಗ್ ಆಫ್ ನೇಷನ್ನಿನ ನಿಪುಣ ಮಲೇರಿಯಾ ಸಮಿತಿಯವರು 1938 ರಲ್ಲಿ ಕೊಟ್ಟ ವರದಿ ನಮ್ಮ ಯೋಚನೆಯಲ್ಲಿ ಒರುವುದು. ಮಲೇರಿಯಾ ಋತುವಿಲ್ಲದ ಸ್ಥಿತಿಯಲ್ಲಿ ದಿನವಹಿ 15 ರಿಂದ 20 ಗ್ರೇನು ಕ್ವಿನೈನ್‌ನನ್ನು 5–7 ದಿನಗಳು ಔಷಧವಾಗಿ ಉಪಯೋಗಿಸಲೂ, ಮತ್ತು, ಪ್ರತಿಬಂಧಕವಾಗಿ ಪೂರ್ತಿ ಮಲೇರಿಯಾ ಕಾಲದಲ್ಲಿ ದಿನವಹಿ 6 ಗ್ರೇನು ಕ್ವಿನೈನು ಸೇವನೆಯನ್ನೂ ಅವರು ಶಿಫಾರಸು ಮಾಡಿದ್ದಾರೆ. ಈ ಶಿಫಾರಸುಗಳು ಏನೊಂದೂ ಗೊಂದಲವಿಲ್ಲದೆ ಪ್ರತಿಯೋರ್ವರಿಂದಲೂ ದಿನವಹಿ ಜೀವನದಲ್ಲಿ ಅನುಸರಿಸಬಹುದಾಗಿರುವಷ್ಟು ಸರಳವಾಗಿವೆ.

ಕೊರಿಯಾದಲ್ಲಿ ವಿಶ್ವಸಂಸ್ಥೆ ವಿಮಾನಗಳ ಮೇಲಿನ ಧ್ವಜಗಳು